# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 116 (134) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 28/01/2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಹೊರವಲಯದಲ್ಲಿರುವ ನೈಸ್ ರಸ್ತೆಯನ್ನು ಉಪಯೋಗಿಸಲು ತೆರಬೇಕಾಗಿರುವ ಟೋಲ್ ದರಗಳ ಪರಿಷ್ಕರಣೆ ಯಾವ ಯಾವ ವರ್ಷಗಳಲ್ಲಿ ಮಾಡಲಾಗಿದೆ; | ಬಿಎಂಐಸಿ ಯೋಜನೆಯ ನೈಸ್ ರಸ್ತೆಯಲ್ಲಿ ಟೋಲ್ ದರವನ್ನು ನಿಗಧಿಪಡಿಸಿ 2008, 2010 (2 ಬಾರಿ), 2011 ರಲ್ಲಿ ಸರ್ಕಾರದಿಂದ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br>ನಂತರ 2017, 2022, 2023, 2024 ಮತ್ತು 2025ನೇ ಸಾಲುಗಳಲ್ಲಿ ಟೋಲ್ ದರಗಳನ್ನು ಪರಿಷ್ಕರಿಸಿ ಸಂಸ್ಥೆಯು ಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟಣೆ ಹೊರಡಿಸಿದ್ದು, ಈ ಪರಿಷ್ಕರಣೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಯಾವುದೇ ಅಧಿಸೂಚನೆ ಹೊರಡಿಸಲಾಗಿರುವುದಿಲ್ಲ. |
| ಆ) | ಪ್ರತಿ ವರ್ಷ ನೈಸ್ ಸಂಸ್ಥೆಯವರು ಕೇಳಿರುವ ಟೋಲ್ ದರ ಪರಿಷ್ಕರಣೆ ಹಾಗೂ ಸರ್ಕಾರದಿಂದ ಸಿಕ್ಕಿರುವ ಅಂಗೀಕಾರದ ಕುರಿತು ವಿವರಗಳನ್ನು ನೀಡುವುದು; | • ಮೆ॥ ನೈಸ್ ಸಂಸ್ಥೆರವರು ರಸ್ತೆಯನ್ನು ನಿರ್ಮಾಣಗೊಳಿಸಿದ ನಂತರ ಟೋಲ್ ಸಂಗ್ರಹಿಸುವುದಕ್ಕೆ ದಿನಾಂಕ:04-09-2000 ರಂದು Toll Concession Agreement ಮಾಡಿಕೊಳ್ಳಲಾಗಿರುತ್ತದೆ.<br>• Toll Concession ಕರಾರಿನ ಆರ್ಟಿಕಲ್ 6.4 ರನ್ವಯ ಮೆ॥ ನೈಸ್ ಸಂಸ್ಥೆರವರು ಟೋಲ್ ಪರಿಷ್ಕರಣೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. ಒಂದು ವೇಳೆ ಸರ್ಕಾರವು 30 ದಿನಗಳ ಒಳಗೆ ಕ್ರಮ ಕೈಗೊಳ್ಳದೇ ಇದ್ದ ಪಕ್ಷದಲ್ಲಿ ಸರ್ಕಾರದ ಅನುಮೋದನೆ ಇದೆ ಎಂದು ಪರಿಗಣಿಸಿ ಸಂಸ್ಥೆಯು ಟೋಲ್ ದರವನ್ನು ಪರಿಷ್ಕರಿಸಲು ಅವಕಾಶವಿರುತ್ತದೆ.<br>• Toll Concession ಕರಾರಿನನ್ವಯ ನೈಸ್ ಸಂಸ್ಥೆಯಿಂದ 2008, 2010 ಮತ್ತು 2011ನೇ ಸಾಲಿನವರೆಗೂ ಸಲ್ಲಿಸಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಟೋಲ್ ದರಗಳನ್ನು ನಿಗಧಿಪಡಿಸಿ ಸರ್ಕಾರದಿಂದ ಅಧಿಸೂಚನೆ ಹೊರಡಿಸಲಾಗಿರುತ್ತದೆ. |

<table>
<tr>
<td></td>
<td></td>
<td>➢ ರಾಜ್ಯಪತ್ರ ಸಂಖ್ಯೆ: ಲೋಇ 40 ಸಿಆರ್‌ಎಂ 2008, ದಿನಾಂಕ:18-12-2008<br>➢ ರಾಜ್ಯಪತ್ರ ಸಂಖ್ಯೆ: ಲೋಇ 40 ಸಿಆರ್‌ಎಂ 2008, ದಿನಾಂಕ: 01-01-2010<br>➢ ರಾಜ್ಯಪತ್ರ ಸಂಖ್ಯೆ: ಲೋಇ 40 ಸಿಆರ್‌ಎಂ 2008, ದಿನಾಂಕ: 29-05-2010<br>➢ ರಾಜ್ಯಪತ್ರ ಸಂಖ್ಯೆ: ಲೋಇ 86 ಸಿಆರ್‌ಎಂ 2010, ದಿನಾಂಕ:05-02-2011<br>• ನೈಸ್ ಸಂಸ್ಥೆಯು 2017, 2022, 2023, 2024 ಹಾಗೂ 2025ನೇ ಸಾಲುಗಳಲ್ಲಿ ಟೋಲ್ ದರಗಳನ್ನು ಪರಿಷ್ಕರಿಸಿದ್ದು, 2022ರಲ್ಲಿ ಹೊರತುಪಡಿಸಿ ಉಳಿದ ವರ್ಷಗಳಲ್ಲಿ ಟೋಲ್ ದರ ಪರಿಷ್ಕರಣೆ ಕುರಿತು ಸರ್ಕಾರಕ್ಕೆ ಮಾಹಿತಿ ನೀಡಿರುವುದಿಲ್ಲ. ಈ ಹಿನ್ನಲೆಯಲ್ಲಿ ಸರ್ಕಾರಕ್ಕೆ ಮಾಹಿತಿ ನೀಡದೇ ಟೋಲ್ ದರ ಪರಿಷ್ಕರಣೆ ಮಾಡಿರುವುದರ ಕುರಿತು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಕ್ರಮವಹಿಸಲಾಗುತ್ತಿದೆ.</td>
</tr>
<tr>
<td>ಇ)</td>
<td>ಹಾಲಿ ದರದಂತೆ ನೈಸ್ ರಸ್ತೆಯಲ್ಲಿ ದ್ವಿಚಕ್ರ ವಾಹನ, ನಾಲ್ಕು ವಾಹನ ಹಾಗೂ ಬೃಹತ್ ವಾಹನಗಳಿಗೆ ಕಿ.ಮೀ. ಒಂದಕ್ಕೆ ನೈಸ್ ರಸ್ತೆಯಲ್ಲಿ ವಿಧಿಸುತ್ತಿರುವ ಟೋಲ್ ದರವೇನು:</td>
<td>ದಿನಾಂಕ: 01-07-2025 ರನ್ವಯ ಮೆ॥ ನೈಸ್ ಸಂಸ್ಥೆರವರು ಪ್ರತಿ ಕಿ.ಮೀಗೆ ಈ ಕೆಳಕಂಡಂತೆ ದರಗಳನ್ನು ನಿಗಧಿಪಡಿಸಿರುತ್ತಾರೆ.
<table>
<tr><th rowspan="2">VEHICLE TYPE</th><th colspan="2">Average TOLL Rates Per Km (in Rs.)</th></tr>
<tr><th>Peripheral Road</th><th>Link Road</th></tr>
<tr><td>Car</td><td>7.50</td><td>9.00</td></tr>
<tr><td>Bus</td><td>22.00</td><td>25.00</td></tr>
<tr><td>Truck</td><td>14.00</td><td>17.00</td></tr>
<tr><td>LCV</td><td>8.75</td><td>10.00</td></tr>
<tr><td>MAV</td><td>14.00 per Axle</td><td>19.00</td></tr>
<tr><td>Two – wheeler</td><td>2.50</td><td>3.00</td></tr>
</table>
</td>
</tr>
<tr>
<td>ಈ)</td>
<td>ನೈಸ್ ರಸ್ತೆ ಗುತ್ತಿಗೆ ಯಾವಾಗ ಮುಕ್ತಾಯವಾಗುತ್ತದೆ:</td>
<td>• ಬೆಂಗಳೂರು ಮತ್ತು ಮೈಸೂರು ನಗರದ ಮಧ್ಯೆ ಸಂಪರ್ಕ ಕಲ್ಪಿಸಲು ಮೆ॥ ನಂದಿ ಇನ್‌ಫ್ರಾಸ್ಟಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (ಮೆ॥ ನೈಸ್) ಸಂಸ್ಥೆಯೊಂದಿಗೆ 03/04/1997 ರಲ್ಲಿ ಫ್ರೇಮ್‌ವರ್ಕ್ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ.<br>• ಸದರಿ ಒಪ್ಪಂದದನ್ವಯ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕೆಳಕಂಡಂತೆ ಷರತ್ತು ವಿಧಿಸಲಾಗಿರುತ್ತದೆ:</td>
</tr>
</table>

| | | |
|---|---|---|
| | | ***3.3 Toll Road***<br>*3.3.1 GOK hereby unconditionally and irrevocably grants to the Company the sole and exclusive concession, right and franchise to design, develop, construct, operate and maintain the Toll Road and collect tolls and all other revenues relating to the Toll Road or any part thereof for a period beginning on the date hereof and ending on the date 30 years from the date set forth in the Toll Road Completion Notice (the "Concession Period");provided that the Concession Period may be extended for an additional period of time with the mutual consent of the Parties.*<br>ಮುಂದುವರೆದು ಯೋಜನೆಯು ಪೂರ್ಣಗೊಂಡು Completion Certificate ನೀಡಿದ 30 ವರ್ಷಗಳವರೆಗೆ ಗುತ್ತಿಗೆ ಅವಧಿ ಇರುತ್ತದೆ. ಈ ಸಂಬಂಧ ಯೋಜನೆಯ ಕುರಿತು ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪರಾಮರ್ಶಿಸಲು ದಿನಾಂಕ:16.04.2025ರಂದು ಸಚಿವ ಸಂಪುಟ ಉಪಸಮಿತಿಯನ್ನು ರಚಿಸಲಾಗಿರುತ್ತದೆ. ಉಪ ಸಮಿತಿಯು ನೀಡುವ ನಿರ್ಣಯದಂತೆ ಕ್ರಮವಹಿಸಲಾಗುವುದು. |

ಸಂಖ್ಯೆ: ಲೋಇ 46 ಸಿಆರ್‌ಎಂ 2026

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು